# ಶಂಕಮ್ಮನ ಎಲ್ಲ ಕಾಲದ ಕಥೆ

ಜನಪದ ಮಹಾಕಾವ್ಯಗಳು ರೂಪುಗೊಳ್ಳುವುದು ಜನರ ಸಮೃದ್ಧ ಬದುಕು ಹಾಗೂ ನೆನಪುಗಳಿಂದ. ಜಗತ್ತಿನ ಎಲ್ಲಾ ಮಹಾಕಾವ್ಯ ಮೊದಲು ಥೋಂಡೀ ರೂಪದಲ್ಲಿದ್ದು ಅವು ಜನರ ನಡುವೆ ಜೀವಿಸುವುದೇ ವಾಕ್ ಪರಂಪರೆಯ ಮೂಲಕ. ಈ ಪರಂಪರೆಯಲ್ಲಿ ಮಹಾಕಾವ್ಯವೊಂದು ಜನರ ನಡುವೆ ಚಲಿಸುವ, ಅವರ ಆಶೋತ್ತರಗಳಿಗೆ ತಕ್ಕಂತೆ ಬೇಕಾದುದನ್ನು ಸೇರಿಸಿಕೊಳ್ಳುವ, ಬೇಡವಾದುದನ್ನು ಬಿಡುವ ಎರಡೂ ಸ್ವಾತಂತ್ರ್ಯವನ್ನು ಹೆಚ್ಚೂಕಡಿಮೆ ಜನರ ಭಕ್ತಿಭಾವಗಳಿಗೆ, ನಿರೀಕ್ಷೆಗಳಿಗೆ ತಕ್ಕಂತೆ ಮಹಾಕಾವ್ಯ ಪರಂಪರೆಯೊಂದು ಜೀವಿಸುತ್ತದೆ.

ಕಾವ್ಯ ಮೈತಳೆದ ನಂಬಿಕೆಗಳು, ಆಚರಣೆಗಳು, ಸಮಾಜ ಹಾಗೂ ಜೀವನ ವಿಧಾನ ಆ ಕಾವ್ಯದಲ್ಲಿ ಒಪ್ಪಿತವೆನ್ನುವಂತೆಯೇ ಚಿತ್ರಿತವಾಗುತ್ತದೆ. ಹೀಗಾಗಿ ಜಗತ್ತಿನ ಎಲ್ಲಾ ಮಹಾಕಾವ್ಯಗಳು ಒಂದು ಕಾಲಘಟ್ಟವನ್ನು ಪ್ರತಿಫಲಿಸುವ ಕನ್ನಡಿಗಳೇ ಹೊರತು ಸಮಕಾಲೀನ ಜೀವನ ದರ್ಶನಗಳಲ್ಲ.

ಮಲೆ ಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಗಳು ಕರ್ನಾಟಕದ ಎರಡು ಬಹುದೊಡ್ಡ ಜನಪದ ಮಹಾಕಾವ್ಯಗಳು. ಕಂಸಾಳೆಯ ಮೂಲಕ ನಿರ್ವಹಿಸಲ್ಪಡುವ ಮಾದೇಶ್ವರನ ಕಾವ್ಯ ಮತ್ತು ನೀಲಗಾರರ ಮೂಲಕ ನಿರ್ವಹಿಸಲ್ಪಡುವ ಮಂಟೇಸ್ವಾಮಿ ಕಾವ್ಯವನ್ನು ಜನರ ಮಧ್ಯೆ ಆದಿಯಿಂದಲೂ ಜೀವಂತವಾಗಿ ಇರಿಸಿಕೊಂಡು ಬಂದವರು ಆದಿ ಕರ್ನಾಟಕ ಮತಸ್ಥರು. ಮಾದೇಶ್ವರ ಮತ್ತು ಮಂಟೇಸ್ವಾಮಿ ಪವಾಡಪುರುಷರಾಗಿ ಬೆಳೆದಂತೆಲ್ಲಾ ಅವರ ಹುಟ್ಟಿನ ಮೂಲ ಮರೆಯಾಗುತ್ತಾ ಮಠಮಾನ್ಯಗಳ ಮೇಲೆ ಪಟ್ಟಭದ್ರ ಹಿತಾಸಕ್ತರ ಹಿಡಿತ ಬಿಗಿಯಾಗುತ್ತಾ ಹೋಯಿತು.

ರಾಮಾಯಣ, ಮಹಾಭಾರತ ಪರಂಪರೆಗಳಂತೆ ಇವು ಸೇಡಿನ, ಯುದ್ಧದ ಕಥನಗಳಲ್ಲ. ಹೆಣ್ಣನ್ನು ಕದ್ದೊಯ್ದ, ಹೆಣ್ಣಿಗೆ ಅವಮಾನ ಮಾಡಿದ ಕಾರಣದಿಂದ ಸಂಭವಿಸಿದ ಕಥನಗಳಲ್ಲ ಇವು. ಇಲ್ಲಿ ರಾಮ, ಕೃಷ್ಣ, ಶಿವನಂತಹ ಮಹಾನ್ ದೈವಗಳು ಭಾಗವಹಿಸುವುದಿಲ್ಲ. ಜನಮಾನಸದಲ್ಲಿ ಬೆರೆತುಹೋದ, ಅವರೊಂದಿಗೆ ಜೀವಿಸಿದ, ಪವಾಡ ಮೆರೆದ ಪವಾಡಪುರುಷರು ಇವರಾಗಿದ್ದಾರೆ. ಪವಾಡ ನಡೆಯುವ ಕಡೆ ಪ್ರಶ್ನೆಗಳಿಗೆ ಅವಕಾಶವಿರುವುದಿಲ್ಲ. ಆದರೆ ಇವರು ಆ ಕ್ಷಣಕ್ಕೆ ಅವರ ಸಮಸ್ಯೆಗಳಿಗೆ ಸ್ಪಂದಿಸಬಲ್ಲರು, ಅವರ ರಕ್ಷಣೆ ಮಾಡಬಲ್ಲವರೂ ಆಗಿರುತ್ತಾರೆ.

ಮಾದೇಶ್ವರ ಕಾವ್ಯವನ್ನು ತಾಳುಗತೆ, ಶ್ರವಣದೊರೆಯ ಸಾಲು, ಜುಂಜೇಗೌಡನ ಸಾಲು, ಶಂಕಮ್ಮನ ಸಾಲು, ಇಕ್ಕೇರಿ ದೇವಮ್ಮನ ಸಾಲು, ಬೇವಿನಹಟ್ಟಿ ಕಾಳಿಯ ಸಾಲು, ಸರಗೂರಪ್ಪನ ಸಾಲು ಎಂದು ಏಳು ಸಾಲುಗಳಲ್ಲಿ ಹಾಡುತ್ತಾರೆ. ಈ ರೀತಿ ಹಾಡುವಾಗ ಜನರಿಗೆ ಇಷ್ಟವಾಗುವ ಸಾಲುಗಳು ಹೆಚ್ಚು ಬಳಕೆಯಲ್ಲಿದ್ದು ಉಳಿದ ಸಾಲುಗಳು ಹೆಚ್ಚು ಬಳಕೆಯಲ್ಲಿಲ್ಲ.

ಶಂಕಮ್ಮನ ಸಾಲು ಪ್ರಸಿದ್ಧವಾದದ್ದು ಹೆಚ್ಚು ಬಳಕೆಯಲ್ಲಿದೆ. ಈ ಸಾಲಿನಲ್ಲಿ ಬರುವ ಕಥಾನಕವು ಮಾದೇಶ್ವರನ ಮಹಿಮೆಯನ್ನು ಸಾರುವುದರ ಜೊತೆಗೆ ಕೇಳುವವರ ಕರುಳನ್ನು ಚುರುಕ್ ಎನ್ನಿಸುವ ಕಾವ್ಯ ಗುಣ ಹೊಂದಿದೆ. ಶಂಕಮ್ಮನ ಕಷ್ಟಕೋಟಲೆಗಳ ವರ್ಣನೆ ಕೇಳುಗರ ಮನಸ್ಸನ್ನು ನೋಯಿಸುತ್ತದೆ. ತಮ್ಮ ಹೆಣ್ಣುಮಕ್ಕಳದೇ ಈ ನೋವು ಎಂದು ಮರುಗುವಂತೆ ಮಾಡುತ್ತದೆ. ಕಾಲ ಬದಲಾದಂತೆ ಹೆಣ್ಣ ಮೇಲೆ ನಡೆಯುವ ದೌರ್ಜನ್ಯಗಳ ಸ್ವರೂಪವೂ ಬಣ್ಣ ಬದಲಿಸುವ ನಡೆಯನ್ನು ಇಲ್ಲಿನ ಕಥನ ಕಟ್ಟಿಕೊಡುತ್ತದೆ. ಈ ಕಥಾಭಾಗ ಸೋಲಿಗ ಬುಡಕಟ್ಟು ಸಮುದಾಯಕ್ಕೆ ಸೇರಿದ್ದು ಅವರ ಜೀವನ ವಿಧಾನವನ್ನು ಸಹ ಪರಿಚಯಿಸುತ್ತದೆ.

ತಮಗೆ ಸಂತಾನವಾಗಬೇಕೆಂದರೆ ಬ್ರಹ್ಮ ಹೇಳಿದಂತೆ ತಮ್ಮ ಕೊನೆಯ ತಂಗಿ ನೆಗೆಶಂಖಿಗೆಯನ್ನು ವಂಚನೆಯಿಂದ ಭೂಮಿಯಲ್ಲಿ ಬಿಟ್ಟು ಏಳುಜನ ಅಕ್ಕಂದಿರು ದೇವಲೋಕಕ್ಕೆ ಹೊರಟುಹೋಗುತ್ತಾರೆ. ನೀರಿನಲ್ಲಿ ಮೀಯುತ್ತಿದ್ದ ಅವಳ ಅಂದಕ್ಕೆ ಮನಸೋತ ನೀಲಯ್ಯ ಅವಳು ಮೇಲೆ ಬರದಂತೆ ಬಟ್ಟೆಬರೆ ಬಚ್ಚಿಡುತ್ತಾನೆ. ಅಸಹಾಯಕಳಾದ ಅವಳು ಗಂಗೆಯ ಮೊರೆಹೋದಾಗ, ಗಂಗೆ ಅವಳ ಗಾತ್ರದ ಶಂಕವನ್ನು ಸೃಷ್ಟಿಸಿ ಅದರಲ್ಲಿನ ಅವಳನ್ನು ಅಡಗಿಸುತ್ತಾಳೆ. ಭೂಲೋಕದಲ್ಲಿ ಬಾಳಾಟ ಮಾಡಲಿರುವ ಅವಳನ್ನು ಸತ್ಯವಂತೆ ಶಂಕಮ್ಮ ಎಂದು ಹೆಸರಿಟ್ಟು ಹರಸುತ್ತಾಳೆ. ಸೋಲಿಗರ ಕುಲದ ನೀಲೇಗೌಡನ ಏಳನೆಯ ಮಗ ನೀಲಯ್ಯ. ಗಾರುಡಿ, ಮಂತ್ರಮಾಟ ಬಲ್ಲವನಾಗಿದ್ದು ಇಡೀ ಮನೆಯ ಒಕ್ಕಲುತನ, ಪಶುಪಾಲನೆ ಒಬ್ಬನೇ ಮಾಡಬಲ್ಲ ದಕ್ಷ ಕೆಲಸಗಾರ.

ಈಕೆಯ ಚೆಲುವಿಗೆ ಆಕರ್ಷಿತನಾದ ನೀಲಯ್ಯ ಎಲ್ಲರನ್ನು ಒಪ್ಪಿಸಿ ಮದುವೆಯಾಗುತ್ತಾನೆ. ಲಗ್ನವಾಗಿ ಹನ್ನೆರಡು ವರ್ಷಕಳೆದರೂ ಸಂತಾನವಾಗದೆ ಲೋಕದ ಕಣ್ಣಲ್ಲಿ ಆಕೆ ಬಂಜೆಯೆನಿಸಿಕೊಳ್ಳುತ್ತಾಳೆ. ಒಂದು ದಿನ ನೀಲಯ್ಯನಿಲ್ಲದಿದ್ದಾಗ ಅವಳ ಓರಗಿತ್ತಿಯರೆಲ್ಲರೂ ಬಂಜೆ ಎಂದು ಹಳಿದು ಹೊರಗಿಡುತ್ತಾರೆ. ಇದರಿಂದ ಸಿಟ್ಟಿಗೆದ್ದ ನೀಲಯ್ಯ ಮನೆಬಿಟ್ಟು ಹೆಂಡತಿಯೊಂದಿಗೆ ದಟ್ಟವಾದ ಕಾಡಿನಲ್ಲಿ ತನ್ನ ದೊಡ್ಡಿಯೊಂದನ್ನು ಕಟ್ಟಿಕೊಳ್ಳುತ್ತಾನೆ.

ಹನ್ನೆರಡು ವರ್ಷಕ್ಕೊಮ್ಮೆ ಬೇಟೆಗೆ ಹೋಗುವುದು ಕುಲದ ಪದ್ಧತಿಯಾಗಿದ್ದು ಆ ದೀರ್ಘ ಅವಧಿಯಲ್ಲಿ ಸುಂದರಿಯಾದ ಅವಳನ್ನು ದಟ್ಟಡವಿಯಲ್ಲಿ ಬಿಟ್ಟುಹೋಗಲಾರದೆ ಚಡಪಡಿಸುತ್ತಾನೆ. ಹೆಂಡತಿಯ ಬಳಿಬಂದು 'ನಾ ಪರಗಂಡಸನ್ನು ಕಣ್ಣೆತ್ತಿ ನೋಡುವುದಿಲ್ಲ, ನನಗೆ ಹಾಸುವಂಥ ಮುತ್ತಿನ ಸೆರಗು ಒಂಬತ್ತು ತಿಂಗಳಗಂಟ ಪರವರಿಗೆ ಹಾಸುವುದಿಲ್ಲ' ಎಂಬ ಬಲಗೈ ಭಾಷೆ ಕೇಳುತ್ತಾನೆ. ದೇವಲೋಕದ ತಾನು ನರಮನುಷ್ಯನಿಗೆ ಭಾಷೆ ಕೊಟ್ಟರೆ ಅದನ್ನು ತೆಗೆದುಕೊಂಡವನು ಸುಟ್ಟುಹೋಗುತ್ತಾನೆ ಎಂದು ಆಕೆ ಭಾಷೆ ಕೊಡಲೊಪ್ಪುವುದಿಲ್ಲ. ಮಾಟ, ಮಂತ್ರಗಳನ್ನು ಬಲ್ಲ ಮುಂಗೋಪಿ ನೀಲಯ್ಯ ಅವಳು ಮನೆಯೊಳಗಿಂದ ಹೊರಬರಬಾರದೆಂದು ನಗ್ನಳನ್ನಾಗಿ ಮಾಡಿ ನಾನಾವಿಧವಾಗಿ ಬಂಧಿಸಿ, ಬೇತಾಳಗಳನ್ನು ಕಾವಲಿಗಿಟ್ಟು ಅಲ್ಲಿಂದ ತೆರಳುತ್ತಾನೆ.

ಅವಳ ದುಃಖ ಕಡಲಾಗಿ ಹರಿದು ಸುತ್ತಮುತ್ತೆಲ್ಲ ಹರಿಯುತ್ತದೆ. ಬಾಯಾರಿ ಬಂದ ದನಕರುಗಳು ಅದನ್ನು ಕುಡಿಯಹೋದಾಗ ಬಂಜೆಯ ಕಣ್ಣೀರು ಕುಡಿದರೆ ದನದ ಹಟ್ಟಿ ನಾಶವಾಗುತ್ತದೆ ಎಂದು ಅವುಗಳನ್ನು ದೂರ ಸರಿಸಲಾಗುತ್ತದೆ. ಮಾದೇಶ್ವರ ಅಲ್ಲಿಗೆ ಧಾವಿಸಿ ಅವಳನ್ನು ಮುಕ್ತಳಾಗಿಸುತ್ತಾನೆ. ಸಂತಾನಭಾಗ್ಯವನ್ನು ನೀಡಿ ಆ ಮಕ್ಕಳನ್ನು ತನಗೆ ಕಾಣಿಕೆ ನೀಡಬೇಕು ಎಂಬ ಮಾತನ್ನು ಪಡೆಯುತ್ತಾನೆ. ಅದರಂತೆಯೇ ಶಂಕಮ್ಮ ಮುಂದೆ ತನ್ನ ಮಕ್ಕಳಾದ ಕಾರಯ್ಯ, ಬಿಲ್ಲಯ್ಯನನ್ನು ಮಾದೇಶ್ವರನ ಸಂಗಾಟಕ್ಕೆ ಬಿಟ್ಟುಕೊಡುತ್ತಾಳೆ.

ಈ ಮೇಲಿನ ಕಥಾನಕ ಅನಾದಿಕಾಲದಿಂದಲೂ ಮಹಿಳೆಗೆ ಶಾಪವಾಗಿದ್ದ 'ಬಂಜೆಂಬ ಶಬುದ ಕೇಳಲಾರೆ' ಎಂಬ ನೋವಿನ ಕಥೆಯನ್ನು ಹೇಳುತ್ತದೆ. 'ಉತ್ತಲ್ಲದೆ ಮಣ್ಣಲ್ಲ, ಹೆತ್ತಲ್ಲದೆ ಹೆಣ್ಣಲ್ಲ' ಎಂಬ ಮಾತು ಅನಾದಿಕಾಲದಿಂದಲೂ ಚಾಲ್ತಿಯಲ್ಲಿರುವ ಬಗೆಯನ್ನು ಹೇಳುತ್ತದೆ. ದೇವಲೋಕದ ಕನ್ಯೆಯಾದರೂ ಹೆರದಿದ್ದರೆ ಅವಳು ಚಲಾವಣೆಯಲ್ಲಿ ಇಲ್ಲ ಎಂಬ ಮಾತನ್ನು ಪುಷ್ಟೀಕರಿಸುತ್ತದೆ.

ಹೆಣ್ಣಿನ ಶೀಲ ಕಾಪಾಡದಂತೆ ನೋಡಿಕೊಳ್ಳುವುದು ಗಂಡನ ಕರ್ತವ್ಯಗಳಲ್ಲಿ ಒಂದು ಎಂಬ ಪಿತೃಪ್ರಧಾನ ವ್ಯವಸ್ಥೆಯ ಆಶಯಕ್ಕೆ ದಕ್ಕೆತರುವಂತೆ ಮಾತುಕೊಡುವುದಿಲ್ಲ. ನಾನು ಮಾತು ಕೊಡಲಾರೆ ಎನ್ನುವ ಶಂಕವ್ವ ವ್ಯವಸ್ಥೆಯ ಪ್ರತಿರೋಧಕ್ಕೆ ಸಾಕ್ಷಿಯಾಗಿ ನಿಲ್ಲುತ್ತಾಳೆ.

■ **ಅಮೃತಮತಿ**

## ಮಾತೇ ಮುತ್ತು

- ಶ್ರೇಷ್ಠ ವ್ಯಕ್ತಿಗಳಿಗೆ ಧರ್ಮವು ಸ್ನೇಹಿತರನ್ನು ಸಂಪಾದಿಸುವ ಮಾರ್ಗವಾಗಿದೆ. ಆದರೆ, ಚಿಲ್ಲರೆ ವ್ಯಕ್ತಿಗಳಿಗೆ ಧರ್ಮ ಕಲಹವನ್ನು ಸೃಷ್ಟಿಸುವ ಅಸ್ತ್ರವಾಗಿದೆ.

—ಅಬ್ದುಲ್ ಕಲಾಂ

- ಅಹಂಕಾರಕ್ಕಿಂತ ಮತ್ತೊಂದು ಶತ್ರು ಈ ಲೋಕದಲ್ಲಿ ಇಲ್ಲ.

—ಲೋಕೋಕ್ತಿ

- ತಮ್ಮನ್ನು ಕೊಲ್ಲುವ ಧರ್ಮದೊಂದಿಗೆ ಕದನ ಮಾಡುವ ಬದಲು, ಕನಿಷ್ಠ ಬದುಕು ನಡೆಸಲು ಅಡ್ಡಲಾದ ಸಂಗತಿಗಳ ಜೊತೆ ಗುದ್ದಾಡಿ, ಅದೇ ನಿಮಗೆ ಒಳ್ಳೆಯ ಆಯ್ಕೆ.

—ಬಿ.ಆರ್. ಅಂಬೇಡ್ಕರ್